

# ಸಾಲು ಗೂಡಿನ ವಾಸಿ ಅಂಬರಗುಬ್ಬಿ



ಇದು ಯಾವುದೋ ಹುಳು–ಹುಪ್ಪಟೆ ಕಟ್ಟಿಕೊಂಡಿರುವ ಗೂಡಲ್ಲ. ಪಕ್ಷಿಯೊಂದು ಕಟ್ಟಿಕೊಂಡಿರುವ ಮಣ್ಣಿನ ಗೂಡು. ಪಕ್ಷಿ ಮಣ್ಣಿನಲ್ಲಿ ಗೂಡು ಕಟ್ಟುವುದೇ? ಎಂದು ಹುಬ್ಬೇರಿಸಬೇಡಿ. ಒಂದೇ ಕಡೆ ಒಂದಕ್ಕೊಂದು ಸಂಬಂಧ ಇರುವಂತೆ ಮಣ್ಣು ಮಿಶ್ರಿತ ಹುಲ್ಲಿನಿಂದ ಗೂಡು ನಿರ್ಮಿಸಿಕೊಂಡಿರುವ ಈ ಪಕ್ಷಿಯ ಹೆಸರು ಅಂಬರಗುಬ್ಬಿ. ಇದನ್ನು ಕವಲು ತೋಕೆ ಎಂತಲೂ, ಇಂಗ್ಲಿಷ್‌ನಲ್ಲಿ ಸ್ವಾಲೊ ಎಂದೂ ಕರೆಯುತ್ತಾರೆ.

ಕುತ್ತಿಗೆ ಮತ್ತು ಹಣೆ ಭಾಗದಲ್ಲಿ ಕಿತ್ತಳೆ ಬಣ್ಣ ಹೊಂದಿರುವ ಈ ಹಕ್ಕಿಯ ಎದೆಯ ಮೇಲೆ ಕಪ್ಪು ಪಟ್ಟಿ ಇದೆ. ಕಡಲತೀರ, ಕೃಷಿ ಕ್ಷೇತ್ರ, ಮೈದಾನ, ಉದ್ಯಾನವನ, ಜೌಗು ಪ್ರದೇಶ, ಹುಲ್ಲುಗಾವಲು ಪ್ರದೇಶಗಳಲ್ಲಿ ಹೆಚ್ಚಾಗಿ ಗೂಡುಕಟ್ಟಿ ವಾಸಿಸುವ ಅಂಬರಗುಬ್ಬಿಯು ಕಾಮನ್ ಸ್ವಾಲೊ, ಬಾರ್ನ್ ಸ್ವಾಲೊ ಪ್ರಭೇದಕ್ಕೆ ಸೇರುತ್ತದೆ. ಗಂಡು, ಹೆಣ್ಣು ಅಂಬರಗುಬ್ಬಿಯು ಗುಂಪು ಗುಂಪಾಗಿ ಗೂಡು ನಿರ್ಮಿಸಿಕೊಂಡು ಒಂದೇ ಕಡೆ ವಾಸಿಸುತ್ತವೆ. ಕೀಟ ಭಕ್ಷಕಗಳಾದ ಇವು ಗೂಡು ನಿರ್ಮಿಸಿದ ನಂತರ ಅದರೊಳಗೆ ಹುಲ್ಲು, ಗರಿಗಳನ್ನು ನಯವಾಗಿ ಜೋಡಿಸುತ್ತವೆ. ದೊಡ್ಡ ಹಿಂಡಿನಂತೆ ವಾಸಿಸುವ ಇವು ಜೊತೆಯಾಗಿಯೇ ಮರಿಗಳನ್ನು ಸಲಹುತ್ತವೆ.

– ಈರಣ್ಣ ಬೆಂಗಾಲಿ, ರಾಯಚೂರು

# ‘ಕಂತೆ ಭಿಕ್ಷೆ’ಗೆ ಹೊರಟ ಜಂಗಮರು



ಚಿತ್ರದಲ್ಲಿ ಕಾಣುತ್ತಿರುವ ಇವರು ಪ್ರತಿ ವರ್ಷದ ಶ್ರಾವಣ ಮಾಸದಲ್ಲಿ ಭಿಕ್ಷೆ ಬೇಡುವುದನ್ನು ತಮ್ಮ ಸಂಪ್ರದಾಯವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಜೋಳಿಗೆ ಹಿಡಿದು ಭಿಕ್ಷೆ ಬೇಡಲು ಹೋಗುವುದನ್ನು ಇವರು ‘ಕಂತೆ ಭಿಕ್ಷೆ’ ಎಂದು ಕರೆಯುತ್ತಾರೆ. ಶ್ರಾವಣದ ಒಂದು ದಿನದಲ್ಲಿ ಯಾವುದಾದರೊಂದು ಮನೆಗೆ ಹೋಗಿ, ದವಸ ಧಾನ್ಯ, ಬೆಲ್ಲ, ಸಿಹಿ ಖಾದ್ಯಗಳನ್ನು ಬೇಡುತ್ತಾರೆ. ಹೀಗೆ ಕಂತೆ ಭಿಕ್ಷೆಗೆ ಹೊರಡುವ ಇವರು ಯಾವುದೇ ಜಾತಿ ಪಂಗಡದ ಭೇದ ಭಾವವಿಲ್ಲದೆ ಮನೆಗಳಿಗೆ ಕಾಲಿಡುತ್ತಾರೆ. ಇಂತಹ ಆಚರಣೆಯು ಹೆಚ್ಚಾಗಿ ರಾಣೇಬೆನ್ನೂರು, ಹಾವೇರಿ ಪ್ರಾಂತ್ಯದಲ್ಲಿ ಕಂಡುಬರುತ್ತದೆ. ಈ ಪದ್ಧತಿಯನ್ನು ಅವರು ನೂರಾರು ವರ್ಷಗಳಿಂದ ಆಚರಿಸಿಕೊಂಡು ಬರುತ್ತಿದ್ದಾರೆ. ಈ ಬಾರಿ ಜಂಗಮರ ಜೊತೆಗೆ ಪುಟ್ಟ ಮಗುವೊಂದು ಸೇರಿ ತಾನೂ ಭಿಕ್ಷೆಗೆ ತಯಾರಾಗಿದೆ. ಭಿಕ್ಷೆ ಪಡೆದವರು ಭಿಕ್ಷೆ ಕೊಟ್ಟವರಿಗೆ ‘ಅನ್ನದಾತ ಸುಖೀಭವ’ ಎಂದು ಹರಸುತ್ತಾರೆ.

–ಟಿ.ಎಸ್. ಪ್ರತಿಭಾ, ಚಿತ್ರದುರ್ಗ




# ಇದು ಹೆಣ್ಣುಮಗು ವೃತ್ತ

ಬೀದರ್ ಜಿಲ್ಲೆಯಲ್ಲೊಂದು ವಿಶೇಷ ವೃತ್ತವಿದೆ. ಅದರ ಹೆಸರು ಹೆಣ್ಣುಮಗು ವೃತ್ತ. ಇಂಥದ್ದೊಂದು ವೃತ್ತ ರಾಜ್ಯದಲ್ಲಿ ಬೇರೆಲ್ಲೂ ಕಾಣುವುದಿಲ್ಲ. ಈ ವೃತ್ತ ಸ್ಥಾಪನೆಯ ಉದ್ದೇಶ ‘ಹೆಣ್ಣು ಭ್ರೂಣ ಹತ್ಯೆ’ ತಡೆಯುವುದು. ಇದಕ್ಕೆ ಪೂರಕವಾಗಿ ತಾಯಿ ಹಾಗೂ ಹೆಣ್ಣು ಮಗುವಿನ ಪುತ್ಥಳಿಯನ್ನು ಇಲ್ಲಿ ನಿರ್ಮಿಸಲಾಗಿದೆ.

‘ಬೇಟಿ ಬಚಾವೋ, ಬೇಟಿ ಪಡಾವೋ’ ಜಾಗೃತಿ ಕಾರ್ಯಕ್ರಮದ ಭಾಗವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಕಾರದೊಂದಿಗೆ ಇಲ್ಲಿನ ಸಬ್ಬಲ್ ಬರೀದ್ ಶಾಹಿ ಮಾರ್ಗದಲ್ಲಿ ವೃತ್ತ ನಿರ್ಮಿಸಲಾಗಿದೆ.

‘ಹೆಣ್ಣು ಭ್ರೂಣ ಹತ್ಯೆ ನಿಲ್ಲಬೇಕಿದೆ, ಹೆಣ್ಣು ಮಗು ನಮಗೆ ಹೊರೆ ಎನ್ನುವ ಕಳಂಕ ತೊರೆಯಬೇಕಿದೆ, ಸಮಾಜದಲ್ಲಿ ಹೆಣ್ಣಿಗೂ ಗೌರವವಿದೆ’ ಎಂದು ಮನವರಿಕೆ ಮಾಡುವ ದಿಸೆಯಲ್ಲಿ ವೃತ್ತ ನಿರ್ಮಿಸಲಾಗಿದೆ. ಪುತ್ಥಳಿಯ ಸುತ್ತಲೂ ‘ಹೆಣ್ಣು ಮಗುವನ್ನು ಉಳಿಸಿ, ಹೆಣ್ಣು ಮಗುವನ್ನು ಓದಿಸಿ’ ಎಂಬಿತ್ಯಾದಿ ಸಂದೇಶಗಳನ್ನು ಬರೆಸಲಾಗಿದೆ.

–ಶರದ ಕುಲಕರ್ಣಿ, ಬೀದರ್